**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ.355/2019**

| | | |
|---|---|---|
| ಸಾಕ್ಷಿಯ ಹೆಸರುಃ | ಮುನಿಯಪ್ಪ | ಫ್ರಾಸಾಃಃ 3 |
| ತಂದೆಯ ಹೆಸರುಃ | ಗಂಗಪ್ಪ | ಚಾಸಾಃಃ 4 |
| ವಯಸ್ಸುಃ | 58 ವರ್ಷ | ಪ್ರಮಾಣೀಕರಿಸಿದ ದಿಃ 08/07/2025 |
| ಉದ್ಯೋಗಃ | ಎ.ಡಿ.ಎಲ್.ಆರ್, ಪಿರಿಯಾಪಟ್ಟಣ ತಾಲ್ಲೂಕು. | |
| ವಾಸಸ್ಥಳಃ | ಹುಣಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು 2004 ರಿಂದ 2019 ರವರೆಗೆ ತಾಲ್ಲೂಕು ಸರ್ವೇಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ12/09/2014 ರಂದು ತಹಸೀಲ್ದಾರ್ ರವರ ಆದೇಶದ ಮೇರೆಗೆ ನಾನು, ಚಾಸಾ-2 ಮತ್ತು 3 ರವರು ಗಣಿಗಾರಿಕೆ ಸಿಬ್ಬಂದಿಗಳ ಜಂಟಿ ನೇತೃತ್ವದಲ್ಲಿ ದಿಂಡಗಾಡು ಸರ್ವೆ ನಂ.30 ಕ್ಕೆ ಹೋದೆವು. ಅಲ್ಲಿ ಕ್ರಷರನ್ನು ಅಳವಡಿಸಿದ್ದರು. ಅದು ಸರ್ವೆ ನಂ.30 ರಲ್ಲಿದೆ ಎಂದು ದೃಢೀಕರಿಸಿ, ನಾನು ಹಾಗೂ ನನ್ನ ಸಹಾಯಕರು ಅಳತೆ ಮಾಡಿದೆವು. ಸದರಿ ಘಟಕವನ್ನು ದಿನೇಶ ರವರು ನಡೆಸುತ್ತಿದ್ದಾರೆಂದು ತಿಳಿಸಿದರು. ಗಣಿಗಾರಿಕೆಯವರು ಸದರಿ ಸ್ಥಳವನ್ನು ಪರಿಶೀಲಿಸಿ ಅಳತೆ ಮಾಡಿಕೊಂಡರು. ನಾನು ಸ್ಥಳದಲ್ಲಿ ಮಾಡಿದ ಮಹಜರಿಗೆ ಸಹಿ ಮಾಡಿದ್ದೇನೆ. ಸಾಕ್ಷಿಯು ನಿಪಿ.2-ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಸಿ)** ಎಂದು ಗುರುತಿಸಲಾಯಿತು. ನಾವು ಸ್ಥಳಕ್ಕೆ ಹೋದಾಗ ಕ್ರಷರ್ ಯಂತ್ರ ಮತ್ತು ಕ್ವಾರೆ ಇತ್ತು. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>**

3. ಸರ್ವೆ ನಂ.30 ರಲ್ಲಿ ಆರೋಪಿತ ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮತ್ತು ಕ್ರಷರ್ ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾವು ಹೋದಾಗ ಅಲ್ಲಿ ಕಲ್ಲಿನ ಪುಡಿಯನ್ನು ಶೇಖರಿಸಿಟ್ಟಿದ್ದರು ಎಂದರೆ ಸರಿ. ಅದನ್ನು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಅದನ್ನು ಪೋಟೋ ತೆಗೆದರು ಎಂದರೆ ನನಗೆ ಗೊತ್ತಿಲ್ಲ. ಈ ಸಂಬಂಧ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು **ನಿಪಿ.14** ಎಂದು ಗುರುತಿಸಲಾಯಿತು. ನನಗೆ ಈ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ವಿ.ಆರ್ ವಕೀಲರಿಂದಃ</u>**

4. ನಾನು ಕಚೇರಿಗೆ ಬಂದ ದಿನ ಆ ದಿನ ದಿನಚರಿ ಬರೆಯಬೇಕು ಎಂದರೆ ಸರಿ. ಆ ದಿನ ತಹಸೀಲ್ದಾರ್ ರವರ ಆದೇಶದಂತೆ ಸ್ಥಳಕ್ಕೆ ಹೋದ ಬಗ್ಗೆ ನನ್ನ ದಿನಚರಿಯಲ್ಲಿ ಬರೆದಿದ್ದೇನೆ. ತಹಶೀಲ್ದಾರ್ ರವರು ಲಿಖಿತ ಆದೇಶ ನೀಡಿದ್ದರು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.